'ಎಲ್ಲವನ್ನೂ ಪ್ರೀತಿಯಿಂದ ಗೆಲ್ಲಬಲ್ಲೆ' ಎಂಬ ಪಾಠವನ್ನು ನಾನು ಸ್ವಾಮೀಜಿಯವರಿಂದ ಕಲಿತಿದ್ದೇನೆ."

ಒಬ್ಬ ಭಕ್ತ ಮಹಿಳೆ, ತನ್ನ ಮಗ ನಿಜವಾದ ರೀತಿಯಲ್ಲಿ ಮನುಷ್ಯನಾಗಲೆಂದು ಆಶೀರ್ವದಿಸಬೇಕೆಂದು ಕೇಳಿಕೊಂಡರು. ಆಗ ಸ್ವಾಮೀಜಿಯವರು ಆ ಹುಡುಗನಿಗೆ ಹೀಗೆ ಹೇಳಿದರು: "ಶ್ರೀರಾಮಕೃಷ್ಣರನ್ನು ಪ್ರೀತಿಸು. ಅವರಲ್ಲಿ ಶರಣಾಗತನಾಗು. ಅವರನ್ನು ಪ್ರೀತಿಸಿದವರು ಮತ್ತು ಶರಣಾದವರು ಮನುಷ್ಯರೇಕೆ, ದೇವರೇ ಆಗಿಬಿಡುವರು."

ಸ್ವಾಮಿ ಭೂತೇಶಾನಂದಜಿ ಉಪದೇಶಿಸಿದ ಈ ಪಂಚಶೀಲಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಆಚರಣೆಗೆ ತಂದರೆ, ನಮ್ಮ ಜೀವನವು ಸುಂದರ ಪುಷ್ಪದ ಹಾಗೆ ವಿಕಾಸಗೊಳ್ಳುವುದರಲ್ಲಿ ಸಂದೇಹವೇ ಇಲ್ಲ.

೧. ಯಾರಿಗೂ ಕೇಡನ್ನು ಮಾಡಬೇಡ.
೨. ಸತ್ಯವನ್ನು ಎಂದಿಗೂ ತ್ಯಜಿಸಬೇಡ
೩. ಬೇರೆಯವರಿಗೆ ಮಾತುಕೊಟ್ಟಿದ್ದರೆ, ಅದನ್ನು ಪಾಲಿಸದೆ ಇರಬೇಡ; ಎಂದಿಗೂ ಅವರನ್ನು ವಂಚಿಸಬೇಡ
೪. ಇಂದ್ರಿಯಗಳನ್ನು ನಿನ್ನ ವಶದಲ್ಲಿ ಇಟ್ಟುಕೊಂಡಿರು.
೫. ಸಾಧ್ಯವಾದಷ್ಟೂ ವಿಲಾಸಿ ಜೀವನವನ್ನು ತ್ಯಜಿಸಿ, ಸರಳವಾದ ಜೀವನವನ್ನು ನಡೆಸು.

೧೯೯೮ರ ಆಗಸ್ಟ್ ತಿಂಗಳಿನಲ್ಲಿ ಸ್ವಾಮೀಜಿಯವರ ಕರುಳಿನ ರಕ್ತನಾಳಗಳಿಂದ ರಕ್ತ ಸೋರುತ್ತಿದ್ದರಿಂದ, ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆಗ ಅವರು ತಮ್ಮ ಸೇವಕರಿಗೆ ಹೀಗೆ ಹೇಳಿದರು: "ಈ ಬಾರಿ ಶರೀರ ಮಾತ್ರ ಇಲ್ಲಿಗೆ ಬಂದಿದೆ; ಮನಸ್ಸನ್ನು ಬೇಲೂರು ಮಠದಲ್ಲಿಯೇ ಬಿಟ್ಟುಬಂದಿದ್ದೇನೆ." "ಮನಸ್ಸನ್ನು ಶ್ರೀರಾಮಕೃಷ್ಣರ ಪಾದಪದ್ಮಗಳಲ್ಲಿ ಅರ್ಪಿಸಿ ಬಂದಿದ್ದೇನೆ; ಶರೀರ ಮಾತ್ರ ಇಲ್ಲಿಗೆ ಬಂದಿದೆ" ಎಂಬುದೇ ಸ್ವಾಮೀಜಿಯವರ ಭಾವನೆಯಾಗಿತ್ತು.

೧೯೯೮ ರ ಆಗಸ್ಟ್ ೧೦ ರಂದು, ತಮ್ಮ ೯೭ನೆಯ ವಯಸ್ಸಿನಲ್ಲಿ, ಶ್ರೀಮತ್ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಮಹಾಸಮಾಧಿ ಹೊಂದಿದರು. ಅವರ ಅಂತ್ಯಕ್ರಿಯೆಗೆ ಸುಮಾರು ಎರಡು ಲಕ್ಷ ಜನ ಬಂದಿದ್ದರು. ಅವರ ದೇಹತ್ಯಾಗವಾದ ಹದಿಮೂರನೆಯ ದಿವಸದಂದು ಜರುಗಿಸಲಾದ ಆರಾಧನೆಗೆ ಸುಮಾರು ಐದು ಲಕ್ಷ ಜನ ಆಗಮಿಸಿದ್ದರೆಂದು ಸ್ವಾಮಿ ಸುನಿರ್ಮಲಾನಂದಜಿ ಬರೆಯುತ್ತಾರೆ.

ಈಗ ಸ್ವಾಮಿ ಭೂತೇಶಾನಂದಜಿ ಭೌತಿಕವಾಗಿ ನಮ್ಮೊಡನೆ ಇಲ್ಲ. ಆದರೂ ಶ್ರೀರಾಮಕೃಷ್ಣರಿಗೆ ಸಂಪೂರ್ಣವಾಗಿ ಅರ್ಪಿತವಾದ ಅವರ ಸಾರ್ಥಕ ಸರಳ ಜೀವನ ಮತ್ತು ಅವರ ದಿವ್ಯ ಸಂದೇಶಗಳು ನಮಗೆ ಎಂದೆಂದಿಗೂ ದಾರಿದೀಪವಾಗಿರುತ್ತವೆ.

★

## ಆಸ್ತಿಕತೆ


ಸುಂದರ ಕಾಲೇಜಿನಲ್ಲಿ ಓದುತ್ತಿದ್ದ. ಆತ ತುಂಬ ಒಳ್ಳೆಯ ಈಜುಗಾರ. ಅವನು ಬಾಲ್ಯದಿಂದಲೇ ಈಜಿನಲ್ಲಿ ಆಸಕ್ತಿ ವಹಿಸಿದ್ದ. ತಂದೆತಾಯಿಯರ ಪ್ರೋತ್ಸಾಹವೂ ಇತ್ತು. ಒಂದು ದಿನವೂ ಬಿಡದೇ ತರಬೇತಿಗೆ ಹೋಗಿ ಪರಿಶ್ರಮಪಟ್ಟು ಸಾಧನೆ ಮಾಡುತ್ತಿದ್ದ. ಪರಿಶ್ರಮಕ್ಕೆ ತಕ್ಕಂತೆ ಪ್ರತಿಫಲವೂ ದೊರೆಯುತ್ತಿತ್ತು. ಆತ ಬಾಲಕರ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮನಾಗಿ ಬಂದ. ನಂತರ ಯುವಕರ ವಿಭಾಗದಲ್ಲಿ ಪ್ರಥಮನಾದ.

ಅವನು ಕಾಲೇಜು ಸೇರುವ ಸಮಯದಲ್ಲೇ ರಾಷ್ಟ್ರದ ಈಜು ತಂಡದ ಸದಸ್ಯನಾಗಿ ಆಯ್ಕೆಯಾಗಿದ್ದ. ಅದೊಂದು ದೊಡ್ಡ ಸಾಧನೆ. ಮುಂದಿನ ವರ್ಷದ ಒಲಂಪಿಕ್ ಸ್ಪರ್ಧೆಗೆ ಅವನು ದೇಶವನ್ನು ಪ್ರತಿನಿಧಿಸುವುದು ಬಹುತೇಕ ನಿಶ್ಚಯವಾಗಿತ್ತು. ಅವನಿಗೆ ಅಲ್ಲಿ ಬರೀ ಭಾಗವಹಿಸುವುದಕ್ಕಿಂತ ಒಂದು ಹೆಜ್ಜೆಗುರುತು ಮೂಡಿಸುವುದಾಗಲಿ, ಪದಕ ತರುವುದಾಗಲಿ ಮುಖ್ಯವಾಗಿತ್ತು. ಅದಕ್ಕೆಂದೇ ಅವನು ಅತ್ಯಂತ ಶ್ರದ್ಧೆಯಿಂದ ತಯಾರಿ ಮಾಡುತ್ತಿದ್ದ. ದಿನಕ್ಕೆ ಏನಿಲ್ಲವೆಂದರೂ ಆರೇಳು ತಾಸು ಈಜುಕೊಳದಲ್ಲೇ ಇರುತ್ತಿದ್ದ. ಈಜುಕೊಳದ ಅಧಿಕಾರಿಗಳೂ ಇವನಿಗೆ ತುಂಬ ಸಹಕಾರ ನೀಡುತ್ತಿದ್ದರು. ಇವನು ಯಾವಾಗ ಹೋದರೂ ಕೊಳ ತೆರೆದಿರುತ್ತಿತ್ತು. ಆದರೆ ಸುಂದರ, ಶಾಲಾದಿನಗಳಿಂದಲೂ ಒಂದು ತರಹದ ನಾಸ್ತಿಕನಾಗಿದ್ದನು. ಅವನಿಗೆ ಭಗವಂತನ ಮೇಲೆ, ಅವನ ಅಸ್ತಿತ್ವದ ಮೇಲೆ ಕೊಂಚವೂ ನಂಬಿಕೆ ಇರಲಿಲ್ಲ. ಅವನ ತಂದೆ-ತಾಯಿಯರು, ಕೆಲ ಸ್ನೇಹಿತರು ಹೇಳಿದರೂ ಅವನು ತನ್ನ ನಿಲುವನ್ನು ಬದಲಿಸಲಿಲ್ಲ. ಆತನ ಮಾತು ಒಂದೇ – ಪರಿಶ್ರಮ ಮುಖ್ಯ, ದೇವರಲ್ಲ. ದೇವರೆಂಬುದಿಲ್ಲ, ಪರಿಶ್ರಮ ಮಾಡಿದರೆ ಫಲ ದೊರೆಯುತ್ತದೆ.

ಒಂದು ದಿನ ರಾತ್ರಿ ಆತ ಈಜುಕೊಳಕ್ಕೆ ಹೋದ. ಅವನ ಹತ್ತಿರವೇ ಇದ್ದ ಬೀಗದಕೈಯಿಂದ ಕೊಳದ ಬಾಗಿಲು ತೆರೆದು ಒಳಸೇರಿದ. ಅದೊಂದು ಹುಣ್ಣಿಮೆಯ ದಿನ. ಕೊಳದಲ್ಲಿ ಯಾವ ದೀಪವನ್ನೂ ಹಚ್ಚಿರಲಿಲ್ಲ. ಅವನಿಗೆ ಅದು ಬೇಡವೆಂದೇ ಅನ್ನಿಸಿತು. ಶಾಂತ ವಾತಾವರಣ, ಚಂದ್ರನ ಹಾಲು ಬೆಳದಿಂಗಳು ಕೊಳವನ್ನು ತುಂಬಿವೆ. ಹೀಗಿದ್ದರೇ ಚೆನ್ನ ಎಂದುಕೊಂಡು ಬಟ್ಟೆ ಬದಲಿಸಿಕೊಂಡು ಮೂವತ್ತು ಅಡಿ ಎತ್ತರದ ಹಾರುಮಣೆಯನ್ನೇರಿದ. ಅದರ ತುದಿಗೆ ಸರಿದ. ಕೇವಲ ತನ್ನ ತುದಿಬೆರಳುಗಳ ಮೇಲೆ ಭಾರವನ್ನೂರಿ, ಕೊಳದ ಕಡೆಗೆ ಬೆನ್ನುಮಾಡಿ ನಿಂತ. ನಿಧಾನವಾಗಿ ತನ್ನ ಎರಡು ಕೈಗಳನ್ನೂ ಮೇಲಕ್ಕೆತ್ತಿದ. ಇನ್ನೇನು ತಾನು ಹಿಮ್ಮುಖವಾಗಿ ಹಾರಬೇಕೆನ್ನುವಷ್ಟರಲ್ಲಿ ಅವನ ಗಮನ ಹಾರುಮಣೆಯ ಮುಂಭಾಗದ ಕಡೆ ಬಿತ್ತು. ಹಿಂದೆ ಇದ್ದ ಚಂದ್ರನ ಬೆಳದಿಂಗಳು ಇವನ ದೇಹದ ಮೇಲೆ ಬಿದ್ದು ಅದರ ನೆರಳು ಮಣೆಯ ಮೇಲೆ ಚಾಚಿಕೊಂಡಿತ್ತು. ಅದೊಂದು ಸುಂದರ ದೃಶ್ಯ. ಒಬ್ಬ ಮನುಷ್ಯ ಕೈಗಳನ್ನು ಮೇಲಕ್ಕೆತ್ತಿ ಧ್ಯಾನಮಗ್ನನಾಗಿ ದೇವರನ್ನು ಪ್ರಾರ್ಥಿಸುತ್ತಿದ್ದಂತೆ ಕಂಡಿತು. ಒಂದೇ ಕ್ಷಣದಲ್ಲಿ ಅವನ ಮನಸ್ಸಿಗೆ ವಿಶೇಷ ಚಿಂತನೆ ಬಂದಿತು: "ದೇವರಿದ್ದಾನೋ ಇಲ್ಲವೋ ಎಂಬ ಚಿಂತೆ ಏಕೆ? ಇಡೀ ಪ್ರಪಂಚವನ್ನು ನಡೆಸುವ, ನಮ್ಮೆಲ್ಲರಿಗಿಂತ ದೊಡ್ಡ ಶಕ್ತಿ ಇದ್ದಿರಬಹುದು. ಅದನ್ನೇ ಜನ ದೇವರೆಂದು ಕರೆದಿರಬಹುದು. ಆ ಶಕ್ತಿಗೆ ವಂದಿಸುವುದು ಸರಿ" ಆತ ನೀರಿಗೆ ಹಾರಿಕೊಳ್ಳದೇ ಮುಂದೆ ಬಂದು, ಮೊಳಕಾಲೂರಿ ತಲೆತಗ್ಗಿಸಿ ಆ ಶಕ್ತಿಗೆ ನಮಸ್ಕಾರ ಸಲ್ಲಿಸಿದ.

ಆಗ ಫಕ್ಕನೇ ಈಜುಕೊಳದ ಎಲ್ಲ ದೀಪಗಳೂ ಬೆಳಗಿದವು. ಈಜುಕೊಳದ ಉಸ್ತುವಾರಿ ಮಾಡುವ ಮನುಷ್ಯ ಬಂದು ದೀಪಗಳನ್ನು ಬೆಳಗಿಸಿದ್ದ. ಕೆಳಗೆ ನೋಡಿದಾಗ ಸುಂದರನ ಎದೆ ಝಲ್ಲೆಂದಿತು. ಕೊಳದಲ್ಲಿ ಒಂದು ಹನಿ ನೀರೂ ಇರಲಿಲ್ಲ. ಉಸ್ತುವಾರಿ ಮಾಡುವವನು ನೀರನ್ನು ಶುದ್ಧಮಾಡಲು ಕೊಳವನ್ನು ಖಾಲಿಮಾಡಿಬಿಟ್ಟಿದ್ದ. ರಾತ್ರಿ ಸುಂದರ ಈಜಲು ಬರುತ್ತಾನೆಂದು ಅವನಿಗೇನು ಗೊತ್ತು? ಕತ್ತಲಲ್ಲಿ ಸುಂದರನಿಗೆ ಅದು ಕಂಡಿರಲಿಲ್ಲ. ಕೊಳದ ನೀಲಿಬಣ್ಣ, ನೀರಿರುವ ಭ್ರಮೆಯನ್ನು ಕಲ್ಪಿಸಿತ್ತು. ಅವನೇನಾದರೂ ಹಿಮ್ಮುಖವಾಗಿ ಹಾರಿದ್ದರೆ ಏನಾಗುತ್ತಿತ್ತು? ಆಗ ಸುಂದರನಿಗೆ ಅನ್ನಿಸಿತು, ಭಗವಂತನಿಗೆ ತಾನು ಹಾಕಿದ ನಮಸ್ಕಾರ ತನ್ನನ್ನು ಉಳಿಸಿತು ಎಂದು. ಭಗವಂತ ಇದ್ದಾನೋ ಇಲ್ಲವೋ, ಅವನ ಆಕಾರ, ರೂಪ ಹೇಗೆ – ಇವುಗಳ ಚರ್ಚೆಗಿಂತ ನಮ್ಮೆಲ್ಲರಿಗಿಂತ ದೊಡ್ಡದೊಂದು ಶಕ್ತಿ ಇದೆ ಎಂದು ನಂಬುವುದು ಕ್ಷೇಮ. ಅದು ನಮ್ಮಲ್ಲಿ ವಿನಯವನ್ನು ತರುವುದರೊಂದಿಗೆ ನಮ್ಮ ಅಹಂಕಾರ ಅತಿಯಾಗದಂತೆ ನೋಡಿಕೊಳ್ಳುತ್ತದೆ. ★

# 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯಿಂದ




ಸೀತಾರಾಮರು ಹಿಂದೂ ಜನಾಂಗದ ಆದರ್ಶ. ಎಲ್ಲಾ ಮಕ್ಕಳೂ ಅದರಲ್ಲಿಯೂ ಹುಡುಗಿಯರು ಸೀತೆಯನ್ನು ಪೂಜಿಸುವರು. ಸ್ತ್ರೀಯ ಆಕಾಂಕ್ಷೆಯ ಪರಮಾವಧಿಯೇ ಪರಿಶುದ್ಧಳಾದ, ಪತಿ ಪರಾಯಣೆಯಾದ, ಜೀವನವೆಲ್ಲ ನೊಂದ ಸೀತೆಯಂತಾಗುವುದು. ನೀವು ಈ ಶೀಲಗಳನ್ನು ಪರಿಗಣಿಸಿದರೆ ಪೌರಸ್ತ್ಯ ಪಾಶ್ಚಾತ್ಯ ಆದರ್ಶಗಳು ಎಷ್ಟು ಭಿನ್ನವಾಗಿವೆ ಎಂಬುದು ಗೊತ್ತಾಗುವುದು. ಸಂಸಾರದಲ್ಲಿ ಹೇಗೆ ದುಃಖವನ್ನು ಸಹಿಸಬೇಕು ಎಂಬುದಕ್ಕೆ ಸೀತೆ ಇಡೀ ದೇಶಕ್ಕೆ ಆದರ್ಶವಾಗಿರುವಳು. ಪಾಶ್ಚಾತ್ಯರು "ಏನನ್ನಾದರೂ ಸಾಧಿಸಿ. ನಿಮ್ಮ ಪೌರುಷವನ್ನು ತೋರಿ" ಎನ್ನುವರು. ಭಾರತೀಯರು "ಸಹಿಸಿ ತೋರಿ" ಎನ್ನುವರು. ಪಾಶ್ಚಾತ್ಯರು ಜನ ಎಷ್ಟನ್ನು ಪಡೆಯಬಹುದು ಎಂಬ ಸಮಸ್ಯೆಯನ್ನು ಬಗೆಹರಿಸಿರುವರು. ಭಾರತೀಯರು ಮನುಷ್ಯನಿಗೆ ಎಷ್ಟು ಸ್ವಲ್ಪ ಸಾಕು ಎಂಬ ಸಮಸ್ಯೆಯನ್ನು ಪರಿಹರಿಸುವರು. ಈ ಎರಡೂ ಅತಿಯನ್ನೂ ನೋಡಿ. ಸೀತೆಯದು ಭಾರತದೇಶಕ್ಕೆ ಸರಿಹೊಂದಿಕೊಳ್ಳುವ ಶೀಲ. ಭಾರತ ದೇಶದ ಆದರ್ಶ 'ಶೀಲ.' ಅವಳು ನಿಜವಾಗಿ ಪ್ರಪಂಚದಲ್ಲಿ ಇದ್ದಳೆ? ರಾಮಾಯಣ ನಿಜವಾಗಿ ಐತಿಹಾಸಿಕವೆ? ಇದಲ್ಲ ಪ್ರಶ್ನೆ. ಈ ಆದರ್ಶ ಇಲ್ಲಿದೆ. ಸೀತಾದೇವಿಯ ಶೀಲದಷ್ಟು ಮತ್ತಾವ ಪೌರಾಣಿಕ ವ್ಯಕ್ತಿಯೂ ಇಡೀ ಹಿಂದೂ ಜನಾಂಗವನ್ನು ವ್ಯಾಪಿಸಿ, ಅದರ ನಿತ್ಯ ಜೀವನಕ್ಕೆ ಪ್ರವೇಶಿಸಿ, ಸಮಾಜದ ಪ್ರತಿಯೊಂದು ಧಮನಿಯಲ್ಲಿ ಅನುರಣಿತವಾಗುತ್ತಿಲ್ಲ. ಭರತಖಂಡದಲ್ಲಿ ಎಲ್ಲಾ ಒಳ್ಳೆಯದಕ್ಕೆ, ಪರಿಶುದ್ಧವಾಗಿರುವುದಕ್ಕೆ, ಪವಿತ್ರವಾಗಿರುವುದಕ್ಕೆ, 'ಸೀತೆ' ಎಂದೇ ಹೆಸರು. ಸ್ತ್ರೀಯಲ್ಲಿ ಯಾವುದನ್ನು ಸ್ತ್ರೀತ್ವ ಎನ್ನುವೆವೋ ಅದಕ್ಕೇ ಸೀತೆ ಎಂದು ಹೆಸರು. ಬ್ರಾಹ್ಮಣನೊಬ್ಬ ಸ್ತ್ರೀಯನ್ನು ಹರಸಬೇಕಾದರೆ "ಸೀತೆಯಂತಾಗು" ಎನ್ನುವನು. ಹುಡುಗಿಯನ್ನು ಹರಸುವಾಗ "ಸೀತೆಯಂತಾಗು" ಎನ್ನುವನು. ಅವರೆಲ್ಲ ಸೀತೆಯ ಮಕ್ಕಳು. ಶಾಂತಳಾದ, ಸಹಿಷ್ಣುತಾಮೂರ್ತಿಯಂತಿರುವ, ಪತಿವ್ರತೆಯಾದ, ನಿತ್ಯನಿರ್ಮಲಳಾದ ಸೀತೆಯಂತಾಗುವುದಕ್ಕೆ ಯತ್ನಿಸುತ್ತಿರುವರು. ಅವಳು ಅಷ್ಟೊಂದು ಕಷ್ಟವನ್ನು ಅನುಭವಿಸಿದರೂ ರಾಮನ ಮೇಲೆ ಒಮ್ಮೆಯಾದರೂ ಕಟುವಾಗಿ ಮಾತನಾಡುವುದಿಲ್ಲ. ಇದೆಲ್ಲ ತನ್ನ ಕರ್ತವ್ಯವೆಂದು ತನ್ನ ಪಾಲಿಗೆ ಬಂದುದನ್ನು ತಾನು ನಿರ್ವಹಿಸುವಳು. ಅವಳನ್ನು ಕಾಡಿಗೆ ಅಟ್ಟಿದ ಆ ಭಯಾನಕವಾದ ಅನ್ಯಾಯವನ್ನು ನೋಡಿ! ಆದರೆ ಸೀತೆ ಯಾರನ್ನೂ ದೂರುವುದಿಲ್ಲ. ಪುನಃ ಇದು ಭಾರತೀಯರ ಆದರ್ಶ. ಬುದ್ಧ ಹೀಗೆ ಸಾರುವನು: "ಒಬ್ಬ ನಿನ್ನನ್ನು ನೋಯಿಸಿದಾಗ ನೀನು ಅವನಿಗೆ ಪ್ರತಿಕಾರ ಮಾಡುವುದಕ್ಕೆ ಹೋದರೆ, ಮಾಡಿದ ಮೊದಲ ತಪ್ಪನ್ನು ಅದು ನಿವಾರಿಸಲಾರದು. ಪ್ರಪಂಚದಲ್ಲಿ ಮತ್ತೊಂದು ದುಷ್ಕೃತ್ಯ ಹೆಚ್ಚಾಗುವುದು." ಸೀತೆ ಸ್ವಭಾವತಃ ನಿಜವಾದ ಭಾರತೀಯಳು. ಹಿಂಸೆಗೆ ಪ್ರತಿಹಿಂಸೆಯನ್ನು ಅವಳು ಕೊಟ್ಟವಳಲ್ಲ.

ಯಾವುದು ನಿಜವಾದ ಆದರ್ಶ ಯಾರಿಗೆ ಗೊತ್ತು? ಪಾಶ್ಚಾತ್ಯರಲ್ಲಿರುವ ತಾತ್ಕಾಲಿಕವಾದ ಅಧಿಕಾರ ಮತ್ತು ಶಕ್ತಿಯೊ, ಅಥವಾ ಪೌರಸ್ತ್ಯನ ಸಹಿಷ್ಣುತಾಶಕ್ತಿಯೊ?

ಪಾಶ್ಚಾತ್ಯರು ಪಾಪವನ್ನು ಗೆದ್ದು ಅದನ್ನು ಕಡಿಮೆ ಮಾಡುವೆವು ಎನ್ನುವರು. ಪೌರಸ್ತ್ಯರು, "ಪಾಪವನ್ನು ಅನುಭವಿಸಿ ಅದನ್ನು ನಿರ್ಮೂಲ ಮಾಡುತ್ತೇವೆ. ಅದನ್ನು ಗಣನೆಗೇ ತರುವುದಿಲ್ಲ. ಅದೇ ಒಂದು ಆನಂದವಾಗುವುದು" ಎನ್ನುವರು. ಎರಡೂ ದೊಡ್ಡ ಆದರ್ಶಗಳೇ. ಕೊನೆಗೆ ಯಾವುದು ಉಳಿಯುವುದು ಯಾರಿಗೆ ಗೊತ್ತು? ಯಾವ ದೃಷ್ಟಿಯಿಂದ ಮಾನವಕೋಟಿಗೆ ಹೆಚ್ಚು ಮೇಲಾಗುವುದೊ ಯಾರಿಗೆ ಗೊತ್ತು? ಯಾವುದು ಮಾನವನ ಮೃಗೀಯತೆಯನ್ನು ಮೆಟ್ಟಿ ನಿಲ್ಲುವುದೊ, ಗೆಲ್ಲುವುದೊ ಯಾರಿಗೆ ಗೊತ್ತು? ಅನುಭವಿಸುವುದೋ ಅಥವಾ ಏನನ್ನಾದರೂ ಸಾಧಿಸುವುದೊ?

ಏನೇ ಆಗಲಿ, ಒಬ್ಬರು ಇನ್ನೊಬ್ಬರ ಆದರ್ಶವನ್ನು ನಾಶಮಾಡದಿರೋಣ. ನಮ್ಮಿಬ್ಬರ ಗುರಿಯೂ ಒಂದೇ. ಅದೇ ಪಾಪದ ನಾಶ. ನೀವು ನಿಮ್ಮ ಆದರ್ಶವನ್ನು ತೆಗೆದುಕೊಳ್ಳಿ, ನಾವು ನಮ್ಮ ಆದರ್ಶವನ್ನು ತೆಗೆದುಕೊಳ್ಳುತ್ತೇವೆ. ಆದರ್ಶವನ್ನು ನಾಶಮಾಡದಿರೋಣ. ನಾನು ಪಾಶ್ಚಾತ್ಯನಿಗೆ ನಿನ್ನ ಆದರ್ಶವನ್ನು ತೆಗೆದುಕೊ ಎಂದು ಹೇಳುವುದಿಲ್ಲ. ಎಂದಿಗೂ ಹೀಗೆ ಹೇಳುವುದಿಲ್ಲ. ಗುರಿ ಒಂದೇ ಆದರೂ ಮಾರ್ಗ ಒಂದೇ ಅಲ್ಲ. ಭರತಖಂಡದ ಆದರ್ಶಗಳನ್ನು ಕೇಳಿದ ಮೇಲೆ ನೀವು ಭಾರತೀಯರಿಗೆ "ಗುರಿ ಆದರ್ಶ ಇಬ್ಬರಿಗೂ ಸರಿಯಾಗಿ ಇದೆ. ನೀವು ನಿಮ್ಮ ಆದರ್ಶವನ್ನು ಅನುಸರಿಸಿ. ನಿಮ್ಮ ರೀತಿಯಲ್ಲಿ ನೀವು ಮುಂದುವರಿಯಿರಿ. ದೇವರು ನಿಮಗೆ ಒಳ್ಳೆಯದು ಮಾಡಲಿ" ಎಂದು ಆಶೀರ್ವದಿಸುತ್ತೀರಿ ಎಂದು ಭಾವಿಸುತ್ತೇನೆ. ಜೀವನದಲ್ಲಿ ನನ್ನ ಸಂದೇಶವೇನೆಂದರೆ ಪೌರಸ್ತ್ಯರು ಪಾಶ್ಚಾತ್ಯರು ಭಿನ್ನ ಭಿನ್ನ ಆದರ್ಶಕ್ಕಾಗಿ ಹೋರಾಡಬೇಕಾಗಿಲ್ಲ. ಅದು ಎಷ್ಟೇ ವಿರೋಧವಾಗಿ ಕಂಡರೂ ಗುರಿ ಒಂದೇ ಎಂಬುದನ್ನು ತೋರುವುದು. ಈ ಜಟಿಲವಾದ ಸಂಸಾರ ಕಾನನದಲ್ಲಿ ಪ್ರಯಾಣ ಮಾಡುತ್ತಿರುವಾಗ ಒಬ್ಬರು ಇನ್ನೊಬ್ಬರಿಗೆ ಶುಭವನ್ನು ಕೋರೋಣ. ★